## ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

ಒ.ಎಸ್.ನಂಃ 39/21

ಪಿಡಬ್ಲ್ಯುಃ -1

ದಿನಾಂಕಃ 17.08.2023 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ. ಜಿ ಆರ್ ಆರ್ ವಕೀಲರು ಮತ್ತು 2 ನೇ ಪ್ರತಿವಾದಿಯ ಪರ ಶ್ರೀ. ಎನ್ ಎನ್ ಕೆ ವಕೀಲರು ಗೈರು ಹಾಜರಿದ್ದು, ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 3 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ. ಎಂ ಈ ಎಂ ವಕೀಲರಿಂದಃ

ನಾನು ನೆಲಜಿ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದೇನೆ. ದಾವಾ ಆಸ್ತಿ ನನ್ನ ಪಿತ್ರಾರ್ಜಿತ ಆಸ್ತಿ. ಸದರಿ ಆಸ್ತಿ ನನಗೆ ವಿಭಾಗದ ಮೂಲಕ ಬಂದಿರುತ್ತದೆ. ದಾವಾ ಆಸ್ತಿ ಯಾವ ವರ್ಷದಲ್ಲಿ ನನ್ನ ಹೆಸರಿಗೆ ಬಂತು ಎಂದು ಪಹಣಿ ಪತ್ರಿಕೆಯನ್ನು ನೋಡಿ ಹೇಳಬಲ್ಲೆ. ನನಗೆ ಯಾವ ವರ್ಷದಲ್ಲಿ ದಾವಾ ಆಸ್ತಿ ನನ್ನ ಹೆಸರಿಗೆ ಬಂತು ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಅದು ನನ್ನ ತಂದೆಯ ಆಸ್ತಿ. ನನ್ನ ತಂದೆಗೆ ನಾನೊಬ್ಬನೇ ವಾರಸುದಾರ.

2. ನೆಲಜಿ ಗ್ರಾಮದ ಸರ್ವೆ ನಂಬರ್ 142/2, ಸರ್ವೆ ನಂಬರಿ 154/3 ರಲ್ಲಿ 2 ಎಕರೆ 60 ಸೆಂಟ್ಸ್ ಜಾಗ, ಇನ್ನೂ ಸುಮಾರು ಆಸ್ತಿಗಳು ನನ್ನ ಪಾಲಿಗೆ ಬಂದಿರುತ್ತವೆ. ನಿಪಿ-10 ಪಹಣಿ ಪತ್ರಿಕೆಯು ಪೌತಿ ವಾರಸು ನನ್ನ ಹೆಸರಿಗೆ ಬಂದಿದೆ ಎಂದರೆ ಸರಿ. ದಾವಾ ಸ್ವತ್ತಿನ ಎ ಐಟಂನಲ್ಲಿ ನಾನು ಕಾಫಿ ಕೃಷಿ ಮಾಡಿದ್ದೇನೆ ಎಂದು ತೋರಿಸುವ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಹಾಜರು ಮಾಡಿದ್ದೀರಾ ಎಂದರೆ ಹಾಜರು ಮಾಡಿರುವುದಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತನ್ನು ಸರ್ವೆ ಮಾಡಿಸಿದ್ದೇನೆ. ದಾವಾ ಎ ಶೆಡ್ಯೂಲ್ ಸ್ವತ್ತಿನಲ್ಲಿ ರಸ್ತೆ ಯಾವ ವಿಸ್ತೀರ್ಣದಲ್ಲಿ ಇದೆ, ಕಾಫಿ ಕಣ ಯಾವ ವಿಸ್ತೀರ್ಣದಲ್ಲಿ ಎಂದು ತೋರಿಸುವ ದಾಖಲೆ ನಾನು ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಗಳು ನನ್ನ ಬಳಿ ಇಲ್ಲ ಆದರೆ ಅದರ ಸ್ವಾಧೀನದಲ್ಲಿ ಇದ್ದೇನೆ.

3. ಯಾವ ಆಧಾರದ ಮೇಲೆ ನಮ್ಮ ಆಸ್ತಿಯಲ್ಲಿ 250 ಅಡಿಯಿಂದ 300 ಅಡಿ ಉದ್ದದ ರಸ್ತೆ ಇದೆ ಎಂದು ಹೇಳುತ್ತಿದ್ದೀರಾ ಎಂದರೆ ಅಂದಾಜಿನ ಮೇಲೆ ಹೇಳುತ್ತಿದ್ದೇನೆ. ನಾನು ದಾವೆ ದಾಖಲಿಸುವ ಪೂರ್ವದಲ್ಲಿ ಹದ್ದುಬಸ್ತು ಸರ್ವೆ ಮಾಡಿಸಿದ್ದೇನೆ. ಆದರೆ ಹದ್ದು ಬಸ್ತು ಸರ್ವೆ ದಾಖಲೆ ಸಿಕ್ಕಿರುವುದಿಲ್ಲ. ಸದರಿ ಸರ್ವೆಯನ್ನು ನಾನು 5 ವರ್ಷಗಳ ಹಿಂದೆ ಮಾಡಿಸಿದ್ದೇನೆ. ನಮ್ಮ ಆಸ್ತಿಯಲ್ಲಿ 250 ಅಡಿಯಿಂದ 300 ಅಡಿ ಉದ್ದದ ರಸ್ತೆಯು ನನಗೆ ಬುದ್ಧಿ ಬಂದಾಗಿನಿಂದ ಇದೆ. ಸದರಿ ರಸ್ತೆಯನ್ನು ನಾನು, ನನ್ನ ಕುಟುಂಬದವರು, ಸಾರ್ವಜನಿಕರು ಉಪಯೋಗಿಸುತ್ತಿದ್ದಾರಾ ಎಂದರೆ ನಾನು ಮಾತ್ರ ನನ್ನ ಕಣಕ್ಕೆ ಹೋಗಲು ಸದರಿ ರಸ್ತೆಯನ್ನು ಬಳಸುತ್ತೇನೆ ಸದರಿ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಗಳು ಅಭಿವೃದ್ಧಿ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ನಾನು 2 ನೇ ಪ್ರತಿವಾದಿಯ ಬಳಿ ತಕರಾರು ಸಲ್ಲಿಸಿದ್ದೇನೆ. ನಾನು 2 ನೇ ಪ್ರತಿವಾದಿಯ ಬಳಿ ಯಾವ ದಿನಾಂಕದಂದು ತಕರಾರು ಸಲ್ಲಿಸಿದ್ದೆ ಎಂದು ದಿನಾಂಕ ಹೇಳಲು ಬರುವುದಿಲ್ಲ. ತಕರಾರು ಸಲ್ಲಿಸಿದ ಬಗ್ಗೆ ನನ್ನ ಬಳಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಗೆ ನಾನು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಪೊಲೀಸರಿಗೆ ತಕರಾರು ದೂರು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸದರಿ ದೂರು ಕೊಟ್ಟ ದಿನಾಂಕ ನನಗೆ ಈಗ ನೆನಪಿಲ್ಲ. ಪೊಲೀಸರಿಗೆ ದೂರು ಕೊಟ್ಟ ಬಗ್ಗೆ ದಾಖಲೆಯನ್ನು ನಾನು ಹಾಜರು ಮಾಡಿರುವುದಿಲ್ಲ.

( ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ.